ಕಂದಮ್ಮನಿಗೆ ಕಾಯುತ್ತಾ ಕುಳಿತಿರುತ್ತಿದ್ದ. ತಡವಾದರೆ, 'ಯಾವ ಮಂಕಾಡನ ಜೊತಿ ಮಾತಡ್ಕಂಡಿದ್ದೆ ಹೇಳೆ ಮಿಟುಕಲಾಡಿ' ಎಂದು ದಾರಿಯುದ್ದಕ್ಕೂ ಬೈಯುತ್ತಿದ್ದ. ದಾರಿಯಲ್ಲಿ ನಡೆಯುವಾಗ ಪಾಳುಗುಡಿಗಳ ಮುಂದೆ ನಿಂತು ಹೆಂಡತಿ ಕಂದಮ್ಮನಿಗೆ ಗುಡಿಯೊಳಗಿನ ದ್ಯಾವರ ಮೇಲೆ ಆಣಿ ಮಾಡಿಸಿ ಕರ್ಪೂರ ಹಚ್ಚಿಸಿ ಪ್ರಮಾಣ ಮಾಡುವುದು ಮಾಮೂಲಾಗಿತ್ತು. ಆಮ್ಯಾಲೆ ಇಬ್ಬರು ಕೆರೆ ಬಯಲಲ್ಲಿ ಕುಳಿತು ಹೆಂಡ ಕುಡಿದು ತೂರಾಡುತ್ತಾ ದಿನ್ನೆಯ ಬಯಲಿಗೆ ಬರುತ್ತಿದ್ದವರು.

ಅದು ಸಂಕ್ರಾಂತಿ ಕಾಲ, ಊರ ಕಣಗಳ ತುಂಬಾ ಸುಗ್ಗೀ ರಂಗು. ಹಸಿ ಬೆಳಿಗ್ಗೆ ಹದಿನೆಂಟು ಮೈಲಿ ನಡೆದು ಆವಣಿ ಬೆಟ್ಟದತ್ತಿರ ಬಂದಿದ್ದರು. ಆವಣಿ ಬೆಟ್ಟದ ಕೆಳಗಿನ ಕುಂಟೆಯ ಬಳಿ ಕುಂತು, ಪೆದ್ದಯ್ಯ ಸಿವನಯಾಸ ಕಟ್ಟಿಕೊಂಡು ಸುತ್ತಲ ಏಳೂರು ಸುತ್ತಿದರು ಸಿವಪಾರ್ವತಿ ಹಾಂಗ. ಮರಕಲಘಟ್ಟ, ಕಾಲುದಳಲಿ, ಸಿಳೇಸಂದ್ರ, ರಾಮಸಂದ್ರ, ಸಾಲಿನ ಗುಂಟೆ ಸುತ್ತಿ ಕೆಂಪಾಪುರದ ದಾರಿಯಲ್ಲಿನ ಓಣಿ ಆಂಜನೇಯನ ಗುಡಿ ಮುಂದೆ ನಿಂತಾಗ, ಕಂದಮ್ಮ ಯಾವ ಗಂಡಸ ಮ್ಯಾಕ ಮನ್ಸ ಇಟ್ಕಂಡಿಲ್ಲಾ ಎಂದು ಪ್ರಮಾಣ ಮಾಡಿ ಕರ್ಪೂರ ಹಚ್ಚುತ್ತಾಳೆ. ಅದು ಹಳೇ ಗುಡಿ. ಕತ್ತಲು ಕತ್ತಲು ತುಂಬಿದ್ದ ಗುಡಿಯೊಳಗ ಪೆದ್ದಯ್ಯ ದೇವರಿಗೆ ಬಾಗಿ ನಮಸ್ಕರಿಸಿ ಹೆಂಡತಿ ಕಡೆ ನೋಡುತ್ತಾ, 'ಸತ್ಯ ಬದುಕಯ್ತೆ, ಸಕುನ ಪಲಕಯ್ತೆ' ಎಂದು ಹೇಳುತ್ತಿದ್ದಂತೆ, 'ಅಯ್ಯೋ ಹೊಡೀತು, ಅಕಾ, ಅಕಾ...' ಎಂದು ಚೀರುತ್ತಾ ಪೆದ್ದಯ್ಯ ಕೆಳಗೆ ಬಿದ್ದ.

'ಏನಾತು, ಏನಾತು ನನ ಸಾಮಿ' ಎಂದು ಕಂದಮ್ಮ ಅವನನ್ನು ನಿಧಾನವಾಗಿ ಗುಡಿಯಿಂದ ಹೊರಗೆ ಕರೆತಂದು ಆಲದ ಮರದ ಕೆಳಗೆ ಅವನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಸಲುವಿದರೂ ಪೆದ್ದಯ್ಯ, 'ಮತ್ತಿ ಮತ್ತಿ ಹೊಡೀತು, ಅಕ, ಅಕ ಹೊಡೀತು' ಎಂದು ಕನವರಿಸುತ್ತಲೇ ಇದ್ದ. ಆಗಲೇ ಸಂಜೆಯಾಗಿ ಸುತ್ತಲ ಬಯಲೆಲ್ಲ ನಿರ್ಜನವಾಗಿತ್ತು. ಏನು ಮಾಡಿದರೂ ಪೆದ್ದಯ್ಯ ಒಂದೆಜ್ಜೆಯನ್ನೂ ಇಡಲಾಗದೆ ನೆಲದ ಮೇಲೆ ಅಂಗಾತ ಮಲಗಿಬಿಟ್ಟ. 'ಇಕಾ ಸಾಮ್ಗ, ಇದು ಮೂರು ದಾರಿ ಸೇರೋ ಕಾಲುದಾರಿ, ನಾ ನಾಲ್ಕು ತಿಂಗಳು ಏಳೆ ಬಸಿರಾಗಿದ್ದೀನಿ, ಮುಂದ್ಲ ಎರಡು ಹೆಜ್ಜೆ ಹಾಕ್ದ್ರ ಬೂದುಗುಟ್ಟಹಳ್ಳಿ ಸಿಕ್ತಾದ. ಅಲ್ಲಿ ರಾತ್ರಿ ಕಳೆಯಾಣು, ಏಳು ಏಳು' ಎಂದು ಎಷ್ಟು ಗೋಳಾಡಿದರೂ ಪೆದ್ದಯ್ಯ ಕದಲಾಡುತ್ತಿಲ್ಲ. ಹಂಗೂ ಹಿಂಗೂ ಕತ್ತಲು ಕವಿದುಕೊಂಡಾಗ ಹಲ್ಲು ಕಚ್ಚಿದ ಕಂದಮ್ಮ ಗಂಡನನ್ನ ಮೇಲಕ್ಕೆತ್ತಿ, ಆಗಾಗ್ಗೆ ಇಳಿಸುತ್ತಾ ಸ್ವಲ್ಪ ದೂರ ಸಾಗುತ್ತಿದ್ದಂತೆ ಪೆದ್ದಯ್ಯನ ಬಾಯಲ್ಲಿ ನೊರೆ ಬರಹತ್ತಿತು. 'ಗಂಗಿ... ಗಂಗಿ...' ಎಂದು ವದರ ಹತ್ತಿದ ಗಂಡನನ್ನು ತಬ್ಬಿಕೊಂಡು ಕಣ್ಣೀರಿಡುತ್ತಾ ಏನು ದಿಕ್ಕು ತೋಚದಂತಾಗಿ ತನ್ನ ಎದೆಯಾಲನ್ನೇ ಉಣಿಸ ಹತ್ತಿದಳು. ಸುತ್ತಲ ಗವ್ವೆನ್ನುವ ಕತ್ತಲು, ಅವಳಿಗೇನು ಹೊಸದಲ್ಲ. ಇಂತಹಾ ಕತ್ತಲ ರಾತ್ರಿಗಳಲ್ಲಿ ನೂರಾರು ಊರು ಬಯಲುಗಳಲ್ಲಿ ಮಲಗಿದ್ದುಂಟು. ಆದರೆ ಪೆದ್ದಯ್ಯ ಜೊತಿಗಿದ್ದ. ಆದರೆ ಈಗ ಅರೆಪ್ರಜ್ಞೆಯಲ್ಲಿರುವ ಪೆದ್ದಯ್ಯನಿಗೆ ಏನಾಯಿತು ಎಂದು ಅವಳಿಗೆ ತಿಳಿಯಲಾಗಲಿಲ್ಲ. ಇಡೀ ರಾತ್ರಿಯೆಲ್ಲಾ ಅವನ ತಲೆಯನ್ನು ತೊಡೆಯ ಮೇಲೆಯೆ ಇಟ್ಟುಕೊಂಡು ಕುಳಿತ ಕಂದಮ್ಮ ಬೆಳಿಗ್ಗೆ ನೀರಿಗಾಗಿ ಹುಡುಕಾಡಿ ಹತ್ತಿರದಲ್ಲಿದ್ದ ಹಳ್ಳದಿಂದ ತಕಾರಿ ನೀರು ತಂದು ಅವನ ಮುಖ ತೊಳಿದರೂ ಪೆದ್ದಯ್ಯ ಅರೆಗಣ್ಣು ಬಿಟ್ಟುಕೊಂಡು ಏನನ್ನು ಮಾತನಾಡುತ್ತಿರಲಿಲ್ಲ.

ಅಂತೂ ಆ ದಾರಿಯಲ್ಲಿ ಬಂದ ಮೋಡಿಯಾಟದ ತಂಡದವರು ಕಂದಮ್ಮನ ಅಣ್ಣ ಕೇಳಿಕಿ ದೊಡ್ಡೀರಯ್ಯನಿಗೆ ತಿಳಿಸಿದಾಗ ಕಂದಮ್ಮನ ತವರ ಬಳಗ ಅಲ್ಲಿಗೆ ಬಂದು ಎಲ್ಲವನ್ನೂ ವಿಚಾರಿಸಿ